ದಿನಾಂಕ **: 11.02.2026** ರಂದು ಪಿಡಬ್ಲ್ಯೂ - 3 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ ಬಿ.ಕೆ., ಪ್ರತಿವಾದಿ ಪರ ವಕೀಲರಿಂದಃ

ನಾನು ಗೃಹಿಣಿ. ವಾದಿ ನನಗೆ ಸುಮಾರು 5 ವರ್ಷದಿಂದ ಪರಿಚಯವಿದ್ದಾರೆ. ಶಿವಪುರ ಗ್ರಾಮ ಪಂಚಾಯತ್‌ನಲ್ಲಿ ವಾದಿಯು ಎಷ್ಟು ವರ್ಷದಿಂದ ಸದಸ್ಯರಾಗಿದ್ದರು ಎಂದು ನನಗೆ ಮಾಹಿತಿ ಇಲ್ಲ. ಅವರು ನನಗೆ ಅಷ್ಟು ಪರಿಚಯವಿರುವುದಿಲ್ಲ. ಈಗ ನನಗೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ತೋರಿಸಿದ್ದು, ಅದನ್ನು ಚಂದ್ರಶೇಖರ ರವರ ಅಂಗಡಿಯಲ್ಲಿ ಸಹಿ ಮಾಡಿರುತ್ತೇನೆ. ಈಗ ನನಗೆ ನಿಪಿ - 7 ಮತ್ತು ನಿಡಿ - 1 ನ್ನು ತೋರಿಸಿದ್ದು, ನಿಡಿ - 1 ಜೆರಾಕ್ಸ್ ಪ್ರತಿಯಾಗಿರುತ್ತದೆ. ನಿಪಿ - 7 ರಲ್ಲಿ ಇರುವ ಸಹಿಗಳು ನಿಡಿ - 1 ರಲ್ಲಿ ಇರುವುದಿಲ್ಲ ಎಂದರೆ, ನಾನು ಮೂಲಪ್ರತಿಗೆ ಸಹಿ ಮಾಡಿದ್ದೇನೆ. ವಾದಿಯು ಸಹಿ ಹಾಕಿದ ಸುಮಾರು 10 ಅಥವಾ 15 ನಿಮಿಷದ ನಂತರ ನಾನು ಸಹಿ ಹಾಕಿರುತ್ತೇನೆ. ವಾದಿಯು ಸಹಿ ಹಾಕಿರುವುದನ್ನು ನಾನು ನೋಡಿದ್ದೇನೆ. ವಾದಿಯು ಸಹಿ ಹಾಕಿದ ನಂತರ ನಾನು ಸಹಿ ಹಾಕುವವರೆಗೂ ನಿಪಿ - 7 ನ್ನು ಯಾರೂ ಹೊರಗಡೆ ತೆಗೆದುಕೊಂಡು ಹೋಗಿರುವುದಿಲ್ಲ.

ಈ ದಿನ ನ್ಯಾಯಾಲಯದಲ್ಲಿ ಪ್ರಕರಣ ಇರುತ್ತದೆ ಎಂದು ನನಗೆ ನೋಟೀಸು ಬಂದ ಕಾರಣ ತಿಳಿದಿರುತ್ತದೆ. ನಂತರ ಪಿಡಬ್ಲ್ಯೂ 2 ರವರ ಬಳಿ ವಿಚಾರಿಸಿದ್ದು, ಅವರು ಸಹಾ ತಮಗೆ ನೋಟೀಸು ಬಂದಿದೆ ಎಂದು ತಿಳಿಸಿದ್ದು, ನಾವು ಒಟ್ಟಿಗೆ ನ್ಯಾಯಾಲಯಕ್ಕೆ ಬಂದಿದ್ದೇವೆ. ಸದರಿ ನೋಟೀಸಿನ ಪ್ರತಿ ನನ್ನ ಬಳಿ ಇರುವುದಿಲ್ಲ. ಈ ದಿನ ಪ್ರಕರಣ ಇದೆ ಎಂದು ನೋಟೀಸು ಬಂದಿರುವುದಿಲ್ಲ. ನಾನು ವಕೀಲರ ಬಳಿ ಕೇಳಿದ್ದೇನೆ. ಈ ಪ್ರಕರಣಕ್ಕೆ ಹೇಗೆ ಸಾಕ್ಷಿ ಹೇಳಬೇಕು ಎಂದು ನನಗೆ ಯಾರೂ ಹೇಳಿಕೊಟ್ಟಿರುವುದಿಲ್ಲ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಆಚೆ ಈಚೆ ಓಡಾಡುವಾಗ ಪ್ರತಿವಾದಿ ಸಿಕ್ಕಿದ್ದು, ಆ ಸಮಯದಲ್ಲಿ ಸಹಿ ಹಾಕಬೇಕು ಎಂದು ಪ್ರತಿವಾದಿಯು ನನಗೆ ಕರೆದಿದ್ದರು. ಹಾಗೆ ಸಹಿ ಹಾಕಿದ ಅಂದಾಜು ಒಂದು ವಾರದ ಪೂರ್ವದಲ್ಲಿ ಪ್ರತಿವಾದಿಯು ನನಗೆ ತಿಳಿಸಿದ್ದರು. ಹಾಗೆ ಸಹಿಯನ್ನು ಯಾವ ಹೊತ್ತಿನಲ್ಲಿ ಹಾಕಿದ್ದೇನೆ ಎಂದು ನನಗೆ ಸರಿಯಾಗಿ ನೆನಪಿಲ್ಲ. ಆದರೆ ಸಾಧಾರಣವಾಗಿ ಸಂಜೆಯ ಸಮಯ ಇರಬಹುದು. ಪ್ರತಿವಾದಿ ನನ್ನ ಸಮಕ್ಷಮ ಯಾವುದೇ ಸಹಿಯನ್ನು ಹಾಕಿರುವುದಿಲ್ಲ ಹಾಗೂ ನಾನು ಪ್ರತಿವಾದಿಯ ಸಮಕ್ಷಮ ಯಾವುದೇ ಸಹಿಯನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ನಮ್ಮ ಮನೆಯ ಬಳಿ ಇದ್ದು, ನನಗೆ ಚಿಕ್ಕ

ವಯಸ್ಸಿ ನಿಂದಲೂ ಪರಿಚಯವಿದ್ದಾರೆ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.